

# ಮಳೆಗಾಲದಲ್ಲಿ ಸ್ಟೈಲಿಷ್ ಆಗಿ...

ಮಳೆ ವಿಶೇಷ

**ಮಳೆಗಾಲದಲ್ಲಿ ತೊಡುವ ಉಡುಪು ಹೇಗಿರಬೇಕು? ನೋಡುವುದಕ್ಕೆ ಸುಂದರವಾಗಿರುವುದರ ಜೊತೆಗೆ ಮಳೆಯಲ್ಲಿ ಬೆಚ್ಚಗಿನ ಭಾವ ಮೂಡುವಂತೆ ಮಾಡಲು ಯಾವ ರೀತಿಯ ತೊಡುಗೆ ಧರಿಸಬೇಕು? ಇಲ್ಲಿದೆ ಮಳೆಗಾಲದ ಉಡುಪಿನ ಬಗ್ಗೆ ಸಮಗ್ರ ಮಾಹಿತಿ.**

■ **ಪವಿತ್ರಾ ರಾಘವೇಂದ್ರ ಶೆಟ್ಟಿ**

ಮಳೆಯೆಂದರೆ ಹಾಗೆ. ಸಾಕಷ್ಟು ನೆನಪುಗಳನ್ನು ಹೊತ್ತು ತರುತ್ತದೆ. ಮಳೆಯ ಹಾಡು, ಮಳೆಯ ಕವಿತೆ ಎಲ್ಲವೂ ಮನಕ್ಕೆ ಮುದ ನೀಡುತ್ತದೆ. ಇನ್ನು ಹೊರಗಡೆ ಧೋ ಎಂದು ಸುರಿಯುವ ಜಡಿಮಳೆ, ಗುಡುಗು ಸಿಡಿಲಿನ ಅಬ್ಬರ ಇವೆಲ್ಲವೂ ಮನಸ್ಸನ್ನು ತೊಯ್ದು ತೊಪ್ಪೆಯಾಗಿಸುತ್ತದೆ. ಈ ಮಳೆ ಬರೀ ನೆನಪುಗಳನ್ನಷ್ಟೇ ಅಲ್ಲ, ಕೆಲವೊಮ್ಮೆ ಕಿರಿಕಿರಿಯನ್ನುಂಟು ಮಾಡುತ್ತದೆ. ಏಕೆಂದರೆ ಫ್ಯಾಷನ್ ಪ್ರಿಯರಿಗೆ ಮಳೆಗಾಲವೆಂದರೆ ಬರೀ ಬೋರು. ಎಡಬಿಡದೆ ಸುರಿಯುವ ಮಳೆಗೆ ಹೊರಗಡೆ ಹೋಗುವುದಕ್ಕೆ ಆಗುವುದಿಲ್ಲ. ಇನ್ನು ತುಂಬಾ ಸ್ಟೈಲಿಷ್ ಆಗಿ ಉಡುಪು ತೊಟ್ಟು ಹೋದರೆ ಮೈಯೆಲ್ಲಾ ಒದ್ದೆ. ಈ ಮಳೆಗಾಲದಲ್ಲಿ ಹೇಗೆ ಸ್ಟೈಲಿಷ್ ಆಗಿ ಡ್ರೆಸ್ ಮಾಡಬಹುದು? ಮಳೆಗಾಲದಲ್ಲಿ ಲುಕ್ ಹೆಚ್ಚಿಸಲು ಯಾವ ಉಡುಪು ಸಹಾಯ ಮಾಡುತ್ತದೆ?

### ರೈನ್ ಜಾಕೆಟ್/ರೈನ್ ಕೋಟ್

ಕೆಲವರಿಗೆ ಮಳೆಗಾಲದಲ್ಲಿ ಹೊರಗಡೆ ಸುತ್ತಾಡುವುದು, ಟ್ರೆಕ್ಕಿಂಗ್‌ಗೆ ಹೋಗುವುದು ತುಂಬಾ ಇಷ್ಟವಿರುತ್ತದೆ. ಆದರೆ ಕೊಡೆ ಹಿಡಿದುಕೊಂಡು ಒದ್ದಾಡುತ್ತಾ ಹೋಗುವುದು ಕಿರಿಕಿರಿ ಅನಿಸುತ್ತದೆ. ಹಾಯಾಗಿ ಯಾವುದೇ ರಗಳೆ ಇಲ್ಲದೆ ಮಳೆಯಲ್ಲಿ ಓಡಾಡಬೇಕು ಅನ್ನುವವರಿಗೆ ರೈನ್ ಜಾಕೆಟ್ ಒಂದು ವರದಾನ. ಇದರಲ್ಲೂ ಸಖತ್ ಆಗಿ ಕಾಣಿಸಿಕೊಳ್ಳಬಹುದು. ಕೆಲವರು ಯಾವುದಾದರೊಂದು ರೈನ್ ಜಾಕೆಟ್ ಆದರೆ ಸಾಕು ಎಂದು ಖರೀದಿಸುತ್ತಾರೆ. ಹೀಗೆ ಮಾಡದೇ